SINDHI HIGH SCHOOL, BENGALURU

ANNUAL EXAM– 2022-23

SUBJECT: L2 KANNADA

CLASS – 4 MARKS -80

DATE: 16-3-23 Reading Time- 8:00 to 8:15

Number of printed sides: 10 Writing Time 8:15 to10:45

---

**ಸೂಚನೆಗಳು :-**

ಪ್ರಶ್ನೆಪತ್ರಿಕೆಯಲ್ಲಿ ಎ ಮತ್ತು ಬಿ ಎಂಬ ಎರಡು ವಿಭಾಗಗಳಿವೆ.

ಪ್ರಶ್ನೆಪತ್ರಿಕೆಯಲ್ಲಿ ಒಟ್ಟು ೧೨ಮುಖ್ಯ ಪ್ರಶ್ನೆಗಳು ಇರುತ್ತವೆ.

ಪ್ರತಿಯೊಂದು ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಉತ್ತರಿಸಿ.

ಪ್ರಶ್ನೆ ಮತ್ತು ಉಪ ಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.

| | |
|---|---|
| ಭಾಗ - ಎ ವಾಚನ ಮತ್ತು ಗ್ರಹಿಕಾ ಕೌಶಲ್ಯ | ೧೦ ಅಂಕಗಳು |
| ಅನ್ವಯಿಕ ವ್ಯಾಕರಣ | ೧೬ ಅಂಕಗಳು |
| ಬಹು ಆಯ್ಕೆಪ್ರಶ್ನೆ ಪದ್ಯಗಳ ಅಧ್ಯಯನ | ೪ ಅಂಕಗಳು |
| ಪಠಿತಗದ್ಯ ಭಾಗ ಪಠಿತಪದ್ಯ ಭಾಗ | ೧೦ ಅಂಕಗಳು |
| ವಿಭಾಗ--ಬಿ | |
| ಬರವಣಿಗೆ ಕೌಶಲ್ಯ | ೧೨ ಅಂಕಗಳು |
| ಪದ್ಯಗಳ ಅಧ್ಯಯನ | ೨೮ ಅಂಕಗಳು |
| ಒಟ್ಟು ಅಂಕಗಳು | ೮೦ ಅಂಕಗಳು |

## ವಾಚನಾ ಮತ್ತು ಗ್ರಹಿಕಾ ಕೌಶಲ್ಯ

I. (ಅ) ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 1x5=5

ನಮ್ಮ ರಾಷ್ಟ್ರೀಯ ಪಕ್ಷಿ ನವಿಲು,ರಾಷ್ಟ್ರೀಯ ಪ್ರಾಣಿ ಹುಲಿ,ನಮ್ಮ ರಾಷ್ಟ್ರೀಯ ಗೀತೆ ಜನ ಗಣ ಮನ ಎಂದು ನಿಮಗೆಲ್ಲ ತಿಳಿದಿದೆ. ಅದೇ ರೀತಿಯಲ್ಲಿ ನಮ್ಮ ರಾಷ್ಟ್ರೀಯ ಫಲದ ಬಗ್ಗೆ ನಿಮಗೆ ತಿಳಿದಿದೆಯೇ? "ಹಣ್ಣುಗಳ ರಾಜ" ಎಂದು ಹೆಸರುವಾಸಿ ಆಗಿರುವುದು ಮಾವಿನಹಣ್ಣು. ನಮ್ಮ ರಾಷ್ಟ್ರೀಯ ಫಲವೂ ಇದೇ ಆಗಿದೆ. ಮಾವಿನ ಹಣ್ಣಿಗೆ ಭಾರತವೇ ಮೂಲ ಸ್ಥಳ ಮಾವಿಗೆ ರುಚಿಯಲ್ಲಿ ಅಗ್ರ ಸ್ಥಾನ. ಮಾವಿನ ಹಣ್ಣಿನ ಆಕಾರ ಹಾಗೂ ರುಚಿಯಲ್ಲಿ ಹಲವು ತಳಿಗಳಿವೆ. ಅವುಗಳಲ್ಲಿ ಕೆಲವೆಂದರೆ ನೀಲಂ, ಮಲಗೋವ,ರಸಪುರಿ, ತೋತಾಪುರಿ, ಬಾದಾಮಿ ಇತ್ಯಾದಿ.

ಮಾವಿನ ಹಣ್ಣುಗಳಿಂದ ಮಾವಿನ ರಸವನ್ನು ತಯಾರಿಸುತ್ತಾರೆ. ಮಾವಿನ ಹಣ್ಣುಗಳ ಫಲಪಾಕ(ಜ್ಯಾಮ್) ತಯಾರಿಸಲು ಸಹ ಉಪಯೋಗಿಸುತ್ತಾರೆ. ಮಾವಿನಕಾಯಿಯಿಂದ ಉಪ್ಪಿನ ಕಾಯಿ ತಯಾರಿಸುತ್ತಾರೆ. ಉಪ್ಪಿನಕಾಯಿಯ ವಿಶೇಷತೆಯೆಂದರೆ ಇದು ಎಂತಹವರ ಬಾಯಿಯಲ್ಲೂ ನೀರನ್ನು ತರಿಸುತ್ತದೆ. ಒಟ್ಟಿನಲ್ಲಿ ಬೇಸಿಗೆಯ ಕಾಲದಲ್ಲಿ ಸಿಗುವ ಹಣ್ಣನ್ನು ಸವಿಯಲು ಜನರೆಲ್ಲ ಕಾತರದಿಂದ ಕಾಯುತ್ತಿರುತ್ತಾರೆ.

ಪ್ರಶ್ನೆಗಳು :-

೧ ಮಾವಿನ ಹಣ್ಣಿನ ಮೂಲ ಸ್ಥಳವಿದು.

ಅ) ಬೆಂಗಳೂರು ಆ) ಭಾರತ ಇ) ಕರ್ನಾಟಕ ಈ) ಮೈಸೂರು

೨ ಮಾವಿನ ಹಣ್ಣು ಈ ಕಾಲದಲ್ಲಿ ಮಾತ್ರ ಸಿಗುತ್ತದೆ.

ಅ) ಮಳೆಗಾಲ ಆ) ಚಳಿಗಾಲ ಇ) ಸುಖಗಾಲ ಈ) ಬೇಸಿಗೆಕಾಲ

೩ ಮಾವಿನ ಕಾಯಿಯಿಂದ ಇದನ್ನು ತಯಾರಿಸುತ್ತಾರೆ.

ಅ) ಉಪ್ಪಿನ ಕಾಯಿ ಆ) ಹಪ್ಪಳ ಇ) ಐಸ್ ಈ) ಸಂಡಿಗೆ

೪ ಇದು ಹಣ್ಣುಗಳ ರಾಜ

ಅ) ನೇರಳೆ ಹಣ್ಣು  ಆ) ಹಲಸಿನ ಹಣ್ಣು  ಇ) ಮಾವಿನಹಣ್ಣು  ಈ) ಬಾಳೆಹಣ್ಣು

೫ ನಮ್ಮ ರಾಷ್ಟ್ರೀಯ ಪಕ್ಷಿ

ಅ) ಕಾಗೆ  ಆ) ಗುಬ್ಬಚ್ಚಿ  ಇ) ಕೋಳಿ  ಈ) ನವಿಲು

**ಆ)ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ**

ಅಮ್ ಬ್ರೋಸ್ ಹನ್ನೆರಡು ವರ್ಷದ ಬಾಲಕ. ಪೋಲಿಯೋ ಖಾಯಿಲೆಯಿಂದ ಈತನ ಒಂದು ಕಾಲು ಬಲಹೀನವಾಗಿತ್ತು. ಇವನು ತಮಿಳುನಾಡಿನವನು. ತಾಯಿಯೊಂದಿಗೆ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆಯ ಅಂತರಸಂತೆ ಹಳ್ಳಿಗೆ ವಲಸೆ ಬಂದ. ತಂದೆಯಿಲ್ಲದ ಕುಟುಂಬಕ್ಕೆ ಈತನೇ ಆಸರೆ. ಅಂತರಸಂತೆ ಕಬಿನಿ ಜಲಾಶಯದ ದಡದಲ್ಲಿದೆ. ಈ ಜಲಾಶಯದಲ್ಲಿ ದೋಣಿ ನಡೆಸುತ್ತ, ಮೀನು ಹಿಡಿಯುವುದು ಅಮ್ ಬ್ರೋಸ್ ನ ಕೆಲಸವಾಗಿತ್ತು. ಇದಕ್ಕೆ ಅವನ ಅಂಗವಿಕಲತೆ ಅಡ್ಡಿ ಬರಲಿಲ್ಲ. ಇವನು ಸಾಹಸಿ ಮತ್ತು ಧೈರ್ಯಶಾಲಿ. ಪ್ರವಾಹದಲ್ಲಿಯೂ ದೋಣಿ ನಡೆಸುವ ಸಾಮರ್ಥ್ಯವನ್ನು ಮೈಗೂಡಿಸಿ ಕೊಂಡಿದ್ದನು. ಮುರುಗನ್ ಇವನ ಗೆಳೆಯ. ಇವನೂ ದೋಣಿ ನಡೆಸುವುದರಲ್ಲಿ ಈಜುವುದರಲ್ಲಿ ಬಲು ಜಾಣ. ಇವರಿಬ್ಬರಿಗೂ ಶಾಲೆ ಕನಸಿನ ಮಾತು. ದೋಣಿಯ ಅಡಿಯಲ್ಲಿಯೇ ವಾಸ.

ಇವರ ಸಾಹಸ ಮತ್ತು ಜಾಣ್ಮೆ ಪ್ರಪಂಚಕ್ಕೆ ತಿಳಿಯುವ ಸಂದರ್ಭ ಒದಗಿತ್ತು. ೧೯ಲಳರಲ್ಲಿ ಭೀಮನ ಕೊಲ್ಲಿ ಗ್ರಾಮದಲ್ಲಿ ಮಹದೇಶ್ವರಸ್ವಾಮಿ ಜಾತ್ರೆ ನಡೆಯಿತು. ಜಾತ್ರೆ ಮುಗಿಸಿದ ಜನ ಜಲಾಶಯವನ್ನು ದಾಟಿ ಹೋಗಬೇಕಾಗಿತ್ತು. ಸಂಜೆಯ ಸಮಯ. ಅಲ್ಲಿ ಆರು ಜನ ಮಾತ್ರ ಕುಳಿತುಕೊಳ್ಳ ಬಹುದಾದ ಒಂದೇ ಒಂದು ದೋಣಿ. ಆದರೆ ಅವಸರದಲ್ಲಿದ್ದ ಜನ ಅಪಾಯವನ್ನು ಲೆಕ್ಕಿಸದೆ ದೋಣಿಯನ್ನು ಏರಿದರು.

**ಪ್ರಶ್ನೆಗಳು:-** 1x5=5

೧ ಒಂದು ದೋಣಿಯಲ್ಲಿ ಕುಳಿತುಕೊಳ್ಳ ಬಹುದಾದ ಜನರ ಸಂಖ್ಯೆ

ಅ) ಎಂಟು  ಆ) ಆರು  ಇ) ಐದು  ಈ) ಒಂಬತ್ತು

೨ ಅಮ್ ಬ್ರೋಸ್ ಗೆಳೆಯನ ಹೆಸರು ಇದು.

ಅ) ಮುರುಗನ್  ಆ) ಮಾರುಗನ್  ಇ) ಮಹದೇಶ್ವರ  ಈ) ಮಾದೇಶ್ವರ

೩ ಹನ್ನೆರಡು ವರ್ಷದ ಬಾಲಕನಿಗೆ ಬಂದ ಕಾಯಿಲೆ ಇದು

ಅ) ಕರೋನ  ಆ) ಪ್ಲೇಗ್  ಇ) ಪೋಲಿಯೊ  ಈ) ಜ್ವರ

೪ ಅಂತರಸಂತೆ ಹಳ್ಳಿ ಈ ಜಿಲ್ಲೆಯಲ್ಲಿದೆ.

ಅ) ಬಳ್ಳಾರಿ ಆ) ಬೆಂಗಳೂರು ಇ) ಮೈಸೂರು ಈ) ಬೆಳಗಾವಿ

೫ ಭೀಮನ ಕೊಲ್ಲಿ ಗ್ರಾಮದಲ್ಲಿ ಮಹದೇಶ್ವರ ಜಾತ್ರೆ ನಡೆದ ವರ್ಷ.

ಅ) ೧೯೮೪ ಆ) ೧೯೮೯ ಇ) ೧೯೮೫ ಈ) ೧೯೯೯

## ಅನ್ವಯಿಕ ವ್ಯಾಕರಣ

II.ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .

**1x16=16**

೧ ' ಸುರಕ್ಷಿತ' ಪದದ ಸಮಾನಾರ್ಥಕ ಪದ -------------

ಅ) ಜೋಪಾನ ಆ) ಅಜಾಗ್ರತೆ ಇ) ತಾಣ ಈ) ಮೇಲ್ವಿಚಾರಣೆ

೨ 'ಸಹನೆ' ಪದದ ವಿರುದ್ಧ ಪದ -------------

ಅ) ನಿಸ್ಸಹನೆ ಆ) ಆಸಹನೆ ಇ) ಅಸಹನೆ ಈ) ಸಸಹನೆ

೩ " ಮಕ್ಕಳೆಲ್ಲರು ಮೈಸೂರಿಗೆ ಪ್ರವಾಸಕ್ಕೆ ಹೋದರು. ವಾಕ್ಯದಲ್ಲಿರುವ ಕ್ರಿಯಾಪದ ---------

ಅ) ಮೈಸೂರು ಆ) ಹೋದರು ಇ) ಪ್ರವಾಸಕ್ಕೆ ಈ) ಮಕ್ಕಳೆಲ್ಲರು

೪ ರಮೇಶನು ಕುರುಡನ ಕೈ ಹಿಡಿದು ರಸ್ತೆಯನ್ನು ದಾಟಿಸಿದನು. ಈ ವಾಕ್ಯದಲ್ಲಿರುವ ಅನ್ವರ್ಥನಾಮ----

ಅ) ಕುರುಡ ಆ) ದಾಟಿದನು ಇ) ರಸ್ತೆಯನ್ನು ಈ) ರಮೇಶನು

೫ 'ಬಾಲಕ' ಈ ಪದದ ಅನ್ಯಲಿಂಗ ರೂಪ-----------

ಅ) ಬಾಳಕ ಆ) ಬಾದಕ ಇ) ಬಾಲಕಿ ಈ) ಬಾಳಕಿ

೬. 'ಪೆಚ್ಚಾಯ್ತು' - ಈ ಪದದ ಪದ್ಯದಲ್ಲಿರುವಂತೆ ಪ್ರಾಸಪದ ಗುರುತಿಸಿ.

ಅ) ಬಂದಿತ್ತು ಆ) ಹಾಳಾಯ್ತು ಇ) ನೋಡಿತ್ತು ಈ) ಹಾಡಿತ್ತು

೭ ' ಮಗು' ಈ ಪದದ ಬಹುವಚನ ರೂಪ ---------

ಅ) ಮಗುಗಳು ಆ) ಮಕ್ಕಳು ಇ) ಮಕ್ಕಳುಗಳು ಈ) ಮಾಗುಗಳು

೮ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಸರಿಯಾದ ವಾಕ್ಯ

ಅ) ಕಾಣುತ್ತಿರುವ ಓದು ಅಲ್ಲಿ ಸೂಚನ ಫಲಕವನ್ನು ಅಲ್ಲಿ

ಆ) ಸೂಚನಾ ಫಲಕವನ್ನು ಓದು ಅಲ್ಲಿ ಕಾಣುತ್ತಿರುವ

ಇ) ಅಲ್ಲಿ ಕಾಣುತ್ತಿರುವ ಸೂಚನಾ ಫಲಕವನ್ನು ಓದು

ಈ) ಓದು ಅಲ್ಲಿ ಕಾಣುತ್ತಿರುವ ಸೂಚನಾ ಫಲಕವನ್ನು

೯. ಕರ್ನಾಟಕ ಸುಂದರವಾದ ರಾಜ್ಯ. -ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ.

ಅ) ಅಲ್ಪವಿರಾಮ ಆ) ಉದ್ಧರಣ ಇ) ಪೂರ್ಣವಿರಾಮ ಳ) ಭಾವಸೂಚಕ

೧೦ ಕುಣಿದು + ಆಡಿ ಈ ಪದವನ್ನು ಕೂಡಿಸಿ ಬರೆದಾಗ ------------

ಅ ) ಕುಣಿದುಆಡಿ ಆ) ಕೂಣಿದಾಡಿ ಇ) ಕೊಣಿದಾಡಿ ಈ) ಕುಣಿದಾಡಿ

೧೧ ವಿದ್ಯಾರ್ಥಿಗಳು ನಿಧಾನವಾಗಿ ಹಣ್ಣನ್ನು ತಿಂದರು. ವಾಕ್ಯದಲ್ಲಿರುವ ಕರ್ಮಪದ ---------

ಅ) ಹಣ್ಣನ್ನು ಆ) ತಿಂದರು ಇ) ನಿಧಾನವಾಗಿ ಈ) ವಿದ್ಯಾರ್ಥಿಗಳು

೧೨ 'ನೀವೆಲ್ಲರು' ಪದವನ್ನು ಬಿಡಿಸಿ ಬರೆದಾಗ -----------------

ಅ) ನೀನು + ಏಲ್ಲರು ಆ) ನೀನು + ಎಲ್ಲರು ಇ) ನೀವು +ಎಲ್ಲರು ಈ) ನೀವು + ಏಲ್ಲರು

೧೩ ಅಕ್ಕಿಯ ಮೇಲೆ ಆಸೆ ---------------- ಈ ಗಾದೆಯ ಮುಂದಿನ ಭಾಗ

ಅ) ನೆಂಟರ ಮೇಲೆ ಪ್ರೀತಿ ಆ) ಅನ್ನದ ಮೇಲೆ ಆಸೆ

ಇ) ಖಾಲಿಯಾಗುತ್ತೆ ಅಂತ ದುಃಖ ಈ) ಸಾಂಬಾರಿನ ಜೊತೆ ಊಟ

೧೪ ಸಂತೆಯಲ್ಲಿ ರಾಮನು ಸಿಹಿ ತಿಂಡಿಗಳನ್ನು ತಿಂದನು. ವಾಕ್ಯದಲ್ಲಿರುವ ಕರ್ತೃಪದ -------

ಅ) ಸಂತೆಯಲ್ಲಿ ಆ) ರಾಮನು ಇ) ತಿಂದನು ಈ) ತಿಂಡಿಗಳನ್ನು

೧೫ ಸೌಮ್ಯಳು ಪರ್ವತವನ್ನು ಬಾರಿ ಬಾರಿ ನೋಡುತ್ತಿದ್ದಳು. ವಾಕ್ಯದಲ್ಲಿರುವ ರೂಢನಾಮ--------

ಅ) ಸೌಮ್ಯಳು ಆ) ಅನೇಕ ಇ) ಪರ್ವತ ಈ) ನೋಡುತ್ತಿದ್ದಳು

೧೬ 'ಪ್ರಭೇದ' ಈ ಪದದ ಸಮಾನಾರ್ಥಕ ಪದ------------

ಅ) ವಿಭಾಗ ಆ) ಸಮೂಹ ಇ) ಆಶ್ಚರ್ಯ ಈ) ಪದವಿ

**III ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .**

**1x4=4**

೧ ಕೋತಿಗೂ ----------- ನೆಂಟತನ ಮಾಡಲು ಬೇಕೆಂಬ ಹದನ.

ಅ) ಬೆಕ್ಕಿಗೂ ಆ) ಕೋಳಿಗೂ ಇ) ನಾಯಿಗೂ ಈ) ಸಿಂಹಕ್ಕೂ

೨ ಆ ಹಸುವು ಖುಷಿಯಿಂದ -------------- ಓಡಿತು.

ಅ) ಕಾಡಿಗೆ ಆ) ಗದ್ದೆಗೆ ಇ) ಗುಡ್ಡಕ್ಕೆ ಈ) ನಗರಕ್ಕೆ

೩ ಕೋಳಿಗೆ ಸೀರೆಯನುಡಿಸಿದರು ---------- ಒಡವೆಗಳ ತೊಡಿಸಿದರು.

೧ ಪ್ಲಾಸ್ಟಿಕ್ ಆ) ಬೆಳ್ಳಿಯ ಇ) ವಜ್ರದ ಈ) ಚಿನ್ನದ

೪ ಮಂತ್ರವಾದಿಯು ಹೊರಜಗುಲಿಯ ಮೇಲೆ ಕುಳಿತಿದ್ದಾಗ ಅವನ ಹತ್ತಿರ ಬಂದ ಪ್ರಾಣಿ --------

ಅ) ಇಲಿ ಆ) ಹಸು ಇ) ಹುಲಿ ಈ) ನಾಯಿ

**IV. (ಅ) ಕೆಳಗೆ ಕೊಟ್ಟಿರುವ ಪಠ್ಯದಲ್ಲಿನ 'ಸಹನೆ' ಗದ್ಯವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.**

ಒಂದು ಊರಿನಲ್ಲಿ ಒಬ್ಬ ಸಿರಿವಂತನಿದ್ದನು. ಅವನು ತುಂಬಾ ಒಳ್ಳೆಯವನು,ಸದ್ಗುಣಶಾಲಿಯೂ ಆಗಿದ್ದನು. ಅವನ ಹೆಸರು ಸುಗುಣ ಪಾಟೀಲ. ಅವನ ಬಳಿ ಒಬ್ಬ ನಿಷ್ಠಾವಂತನಾದ ಸೇವಕನಿದ್ದ.ಅವನ ಹೆಸರು ಕೆಂಪರಾಜು. ಆತನನ್ನು ಕಂಡರೆ ಸುಗುಣಪಾಟೀಲರಿಗೆ ತುಂಬಾ ಪ್ರೀತಿ ಇತ್ತು. ಯಾವುದೇ ಕೆಲಸವನ್ನಾದರೂ ನಂಬಿಕೆಯಿಂದ ಕೆಂಪರಾಜುವಿಗೆ ವಹಿಸುತ್ತಿದ್ದರು. ಒಂದು ದಿನ ಕೆಂಪರಾಜು ಮನೆಯನ್ನು ಒರೆಸುವಾಗ ಅಕಸ್ಮಾತ್ ಮೇಜಿನ ಮೇಲಿದ್ದ ಹೂದಾನಿ ಕೆಳಗೆ ಬಿದ್ದು ಒಡೆದು ಚೂರಾಯಿತು. ಅದೇ ಹೊತ್ತಿಗೆ ಅಲ್ಲಿಗೆ ಬಂದಿದ್ದ ಸುಗುಣ ಪಾಟೀಲರು ಅದನ್ನು ಗಮನಿಸಿದರು.

ಸುಗುಣಪಾಟೀಲರು - ಏನಿದು? ಹೂದಾನಿ ಒಡೆದು ಹೋಗಿದೆ!

ಕೆಂಪರಾಜು -- ಹೌದು ಧಣಿ. ಮೇಜು ಒರೆಸುವಾಗ ಕೈ ತಗುಲಿ ಬಿದ್ದು ಹೋಯಿತು.

ಸುಗುಣಪಾಟೀಲರು - - ಕೆಲಸ ಮಾಡುವಾಗ ಜಾಗ್ರತೆ ವಹಿಸಬೇಕು. ನಿಧಾನವಾಗಿ ಅಚ್ಚುಕಟ್ಟಾಗಿ ಮಾಡಬೇಕು. ನೀನು ಹಾಗೆ ಮಾಡಿದ್ದರೆ ಹೀಗಾಗುತ್ತಿರಲಿಲ್ಲ.

ಪ್ರಶ್ನೆಗಳು:- 1x5=5

೧ ಹೂದಾನಿ ------------ ಮೇಲೆ ಇತ್ತು.

ಅ) ಮರದ ಆ) ನೆಲದ ಇ) ಮೇಜಿನ ಈ) ಬೀರುವಿನ

೨ ಸಿರಿವಂತನ ಹೆಸರು ------------

ಅ) ಕೆಂಪರಾಜು ಆ) ಸುಗುಣಪಾಟೀಲ ಇ) ಸೋಮಣ್ಣ ಈ) ಕರಿಯಣ್ಣ

೩ ಯಾವುದೇ ಕೆಲಸವನ್ನಾದರು ------------ ಕೆಂಪರಾಜುವಿಗೆ ವಹಿಸುತ್ತಿದ್ದರು.

೧) ಬೇಸರದಿಂದ ಆ) ಕೋಪದಿಂದ ಇ) ಸಂತೋಷದಿಂದ ಈ) ನಂಬಿಕೆಯಿಂದ

೪ ಕೈತಗುಲಿ ಕೆಳಗೆ ಬಿದ್ದು ಚೂರಾದ ವಸ್ತು ------------

ಅ) ಮೇಜು ಆ) ಹೂದಾನಿ ಇ) ಗೊಂಬೆ ಈ) ಬಾಟಲಿ

೫) ---------- ಮಾಡುವಾಗ ಜಾಗ್ರತೆಯಿರ ಬೇಕು.

ಅ) ಊಟ ಆ) ನಿದ್ದೆ ಇ) ಕೆಲಸ ಈ) ಪ್ರಯಾಣ

**ಆ) ಕೆಳಗೆ ಕೊಟ್ಟಿರುವ ಪಠ್ಯದಲ್ಲಿನ 'ಹಣ್ಣು ಕಾಯಿ ಮದುವೆ' ಪದ್ಯವನ್ನು ಓದಿ ಕೊಂಡು ಪ್ರಶ್ನೆಗಳಿಗೆ ಉತ್ತರಿಸಿ.** **1x5=5**

ಬಾಳೆಗೊನೆ ಬಾಗಿ ನಮಿಸಿ ಸ್ವಾಗತ ಅಂತಿತ್ತು
ದೊಳ್ಳುಹೊಟ್ಟೆ ಕುಂಬಳ ಕಾಯಿ ಡೋಲು ಬಾರಿಸಿತ್ತು
ಸೋರೆಕಾಯಿ ಸೊಗಸಾಗಿ ವಾಲಗ ಊದ್ತಿತ್ತು.
ತೆಂಗಿನಕಾಯಿ ಹೋಳುಗಳೆರಡು ತಾಳ ಹಾಕ್ತಿತ್ತು

ಪಿಳ್ಳೆ ಜುಟ್ಟಿನ ಬದನೆಕಾಯಿ ಮಂತ್ರ ಹೇಳ್ತಿತ್ತು

ಕೆಂಪುಮೂತಿ ಮೆಣಸಿನ ಕಾಯಿ ಹೋಮ ಮಾಡ್ತಿತ್ತು

ಗಂಡು ಹೆಣ್ಣು ಹೊಗೆ ತಾಳದೆ ಕಣ್ಣೀರ್ ಹಾಕ್ತಿತ್ತು

ಹೀರೆಕಾಯಿ ಅದನ್ನು ನೋಡಿ ನಕ್ಕು ನಲಿತಿತ್ತು

ಬಾಳೆಕಾಯಿ ಬಾಗಿಬಾಗಿ ಎಲೆ ಹಾಕ್ತಿತ್ತು

ಹುರುಳಿಕಾಯಿ ಊಟಕ್ಕೇಳಿ ಅಂತ ಕೂಗ್ತಿತ್ತು

ಸೌತೆಕಾಯಿ ಲೋಟಕ್ಕೆಲ್ಲ ನೀರು ಹಾಕ್ತಿತ್ತು

ಆಲೂಗಡ್ಡೆ ಎಲೆ ತುಂಬ ಊಟ ಬಡಿಸ್ತಿತ್ತು

ಪಡವಲಕಾಯಿ ಬಳುಕಿ ಬಳುಕಿ ವೀಳ್ಯ ಕೊಡ್ತಿತ್ತು

ತೊಂಡೆಕಾಯಿ ತಾಂಬೂಲ ಕೊಟ್ಟು ಟಾ ಟಾ ಹೇಳ್ತಿತ್ತು

ಅಂತು ಇಂತು ಸಿಹಿಗೂ ಕಹಿಗೂ ಮದುವೆ ಆಗಿತ್ತು

ಮಾವಿನ ಹಣ್ಣು ಹಾಗಲಕಾಯಿ ಜೋಡಿಯಾಗಿತ್ತು

ಪ್ರಶ್ನೆಗಳು:-

೧ ಹೊಗೆ ತಾಳಲಾರದೆ ಕಣ್ಣೀರು ಹಾಕುತ್ತಿದ್ದವರು ----------------

ಅ) ಕುಂಬಳ ಕಾಯಿ ಆ) ಗಂಡು-ಹೆಣ್ಣು ಇ) ಮೆಣಸಿನ ಕಾಯಿ ಈ) ಆಲೂಗಡ್ಡೆ

೨ ತಾಂಬೂಲ ಕೊಟ್ಟು ಟಾ ಟಾ ಹೇಳುತ್ತಿದ್ದವರು -----------

ಅ) ಬಾಳೆಕಾಯಿ ಆ) ಹುರಳಿ ಕಾಯಿ ಇ) ಬದನೆಕಾಯಿ ಈ) ತೊಂಡೆಕಾಯಿ

೩ ಬಾಗಿ ನಮಿಸಿ ಸ್ವಾಗತ ಅಂತಿದ್ದವರು ------------

ಅ) ಬಾಳೆಗೊನೆ ಆ) ಪಡವಲಕಾಯಿ ಇ) ಸೌತೆಕಾಯಿ ಈ) ಬಾಳೆಕಾಯಿ

೪ ಲೋಟಗಳಿಗೆ ನೀರು ಹಾಕುತ್ತಿದ್ದವರು ---------------

ಅ) ಆಲೂಗಡ್ಡೆ ಆ) ಪಡವಲ ಕಾಯಿ ಇ) ಸೌತೆಕಾಯಿ ಈ) ಸೋರೆಕಾಯಿ

೫ ಮಂತ್ರ ಹೇಳುತ್ತಿದ್ದವರು -------------

ಅ) ಬದನೆ ಕಾಯಿ ಆ) ಕುಂಬಳ ಕಾಯಿ ಇ) ಮಾವಿನ ಹಣ್ಣು ಈ) ಹೀರೇಕಾಯಿ

**V. ಸುಳಿವು ಪದಗಳ ಸಹಾಯದಿಂದ ಕತೆಯನ್ನು ಪೂರ್ಣಗೊಳಿಸಿರಿ :- ½ x8=4**

**( ಸಮಾನವಾಗಿ, ಪುಣ್ಯ, ಮುದುಕ, ಮರದ , ಆನಂದ, ಬೇಸಿಗೆ, ಕರುಣೆ, ಒಂಭತ್ತು),**

ಹಿಂದೆ ಒಂದು ಹಳ್ಳಿಯಲ್ಲಿ ರಾಜು ಮತ್ತು ________ ಎಂಬ ಗೆಳೆಯರಿದ್ದರು. ವ್ಯಾಪಾರಕ್ಕಾಗಿ ದೂರದ ಊರಿಗೆ ಪ್ರಯಾಣಬೆಳೆಸಿದರು.________ಕಾಲಬಿಸಿಲಿನಝಳ ವಿಪರೀತವಾಗಿತ್ತು..ಮಧ್ಯಾಹ್ನವಾಗುತ್ತಲೇ ನಡೆದು ದಣಿದಿದ್ದರಿಂದ ತುಂಬಾ ಹಸಿವಾಯಿತು. ಇಬ್ಬರು ಒಂದು__________ ನೆರಳಿನಲ್ಲಿ ಕುಳಿತರು.ಮನೆಯಿಂದ ತಂದಿದ್ದ ಬುತ್ತಿ ಗಂಟುಗಳನ್ನು ಬಿಚ್ಚಿದರು ರಾಜುವಿನ ಬುತ್ತಿ ಗಂಟಿನಲ್ಲಿ ಐದು ರೊಟ್ಟಿಗಳಿದ್ದವು. ಆನಂದನ ಹತ್ತಿರ ನಾಲ್ಕು ರೊಟ್ಟಿಗಳಿದ್ದವು. ಇಬ್ಬರೂ ಸೇರಿ ತಿನ್ನಬೇಕೆನ್ನುವಷ್ಟರಲ್ಲಿ ಒಬ್ಬ___________ ಅಲ್ಲಿಗೆ ಬಂದನು. ಆತನು ಕೂಡ ತುಂಬಾ ಹಸಿದಿದ್ದನು .'ನನಗೆ ತುಂಬಾ ಹಸಿವಾಗಿದೆ. ತಿನ್ನಲು ಏನೂ ಇಲ್ಲ. ನನಗೂ ರೊಟ್ಟಿ ಕೊಟ್ಟು __________ಕಟ್ಟಿಕೊಳ್ಳಿ 'ಎಂದು ಬೇಡಿಕೊಂಡನು. ಆತನನ್ನು ನೋಡಿ ಗೆಳೆಯರಿಬ್ಬರಿಗೂ_______ ಹುಟ್ಟಿತು. __________ ರೊಟ್ಟಿಗಳನ್ನು ಮೂವರು ________ ಹಂಚಿ ತಿಂದರು.

**VI. ಕೆಳಗೆ ಕೊಟ್ಟಿರುವ ವಿಷಯ ಗಳಲ್ಲಿ ಒಂದನ್ನು ಕುರಿತು ೫-೬ ವಾಕ್ಯಗಳಲ್ಲಿ ಲಘು ಟಿಪ್ಪಣಿ ಬರೆಯಿರಿ.**

**4x1=4**

೧) ಮರಗಳಿಂದಾಗುವ ಉಪಯೋಗಗಳು ೨) ನೀವು ಕೈಗೊಂಡ ಪ್ರವಾಸ

**VII. ನಿಮ್ಮ ಅಕ್ಕನ ಮನೆಯ ಗೃಹಪ್ರವೇಶಕ್ಕೆ ಹೋಗಬೇಕಾದ ಕಾರಣದಿಂದ ಎರಡು ದಿನಗಳ ರಜೆಯನ್ನು ಕೋರುತ್ತಾ ತರಗತಿಯ ಶಿಕ್ಷಕಿ/ಶಿಕ್ಷಕರಿಗೆ ಒಂದು ರಜಾಪತ್ರವನ್ನು ಬರೆಯಿರಿ. 4x1=4**

## ವಿಭಾಗ -ಬಿ

## ಪದ್ಯಗಳ ಅಧ್ಯಯನ

**VIII. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:- 1x4=4**

೧ ಟಿಪ್ಪುಸುಲ್ತಾನ್ ವಾಸವಿದ್ದ ಅರಮನೆಯ ಹೆಸರೇನು?

೨ ಯಾರನ್ನು ಕರೆಯಲು ಪುಟ್ಟ ಮನೆಯಾಚೆ ಹೋದನು?

೩ ಕಾಗೆಗಳನ್ನು ಎಣಿಸಲು ಬೀರಬಲ್ಲನು ಎಷ್ಟು ದಿನಗಳ ಕಾಲಾವಕಾಶ ಕೇಳಿದನು?

೪ 'ಹಣ್ಣು ಕಾಯಿ ಮದುವೆ' ಪದ್ಯವನ್ನು ಬರೆದವರು ಯಾರು?

**IX. ಕೆಳಗಿನ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ :- 2x4=8**

೧ ಸಲೀಂ ಅಲಿಯವರು ಎಲ್ಲಿ ಮತ್ತು ಯಾವಾಗ ಜನಿಸಿದರು?

೨ ಮಿದ್ದಿನ ಮನೆ ಏಕೆ ನಿರ್ಮಿಸಿದ್ದಾರೆ?

೩ ಯಾವ ಹಣ್ಣು ಮತ್ತು ಕಾಯಿಗೆ ಮದುವೆ ನಡೆದಿತ್ತು? ಛತ್ರದ ತುಂಬ ಯಾರ ಗುಂಪೇ ತುಂಬಿತ್ತು?

೪ ಅಕ್ಬರನು ಪುನಃ ಗಣತಿ ಮಾಡುವಾಗ ಕಾಗೆಗಳು ಹೆಚ್ಚು ಕಡಿಮೆ ಆದರೆ ಎಂದಾಗ ಬೀರಬಲ್ಲನು ನೀಡಿದ ಉತ್ತರವೇನು?

**X. ಈ ಮಾತನ್ನು ಯಾರು- ಯಾರಿಗೆ ಹೇಳಿದರು:- 3x2=6**

೧ "ಛೀ ಬಿಡು ನಿನ್ನ ಹಣ್ಣು ಮುಟ್ಟಿದರೆ ಮುಳ್ಳು"

೨ "ಯಾವುದೋ ಹಳೆಯ ಅರಮನೆಯ ಸ್ಥಳ ಕಾಣುತ್ತಿದೆ".

**XI.ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :- 3x2=6**

೧ ತೆಂಗಿನ ಮರ ಕಲ್ಪವೃಕ್ಷ ಹೇಗೆ?

೨ ಸಲೀಂ ಅಲಿಯವರಿಗೆ ಪಕ್ಷಿ ತಜ್ಞನಾಗಬೇಕೆಂದು ಅನಿಸಿದ್ದೇಕೆ?

**XII. ಯಾವುದಾದರು ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ - 4x1=4**

೧ ದಾಸವಾಳವು ಏನೆಂದು ಬುದ್ಧಿ ಹೇಳಿತು?

**ಅಥವಾ**

ಪುಟ್ಟನು ಗೆಳೆಯರಿಗೆ ಜಂಭದಿಂದ ಏನು ಹೇಳಿದನು? ಗಾಳಿಪಟ ಪದ್ಯದಲ್ಲಿ ಕಂಡು ಬರುವ ನೀತಿಯೇನು?

************